ಉಡುಪಿ ನಗರಸಭೆಗೆ ವಿಶೇಷ ಅನುದಾನ

92 (1174) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನಗರಸಭೆಯಲ್ಲಿ ಪೌರಕಾರ್ಮಿಕರ ಕೊರತೆಯಿಂದ ನಗರದ ಶುಚಿತ್ವವನ್ನು ಗುತ್ತಿಗೆ ಆಧಾರದಲ್ಲಿ ಕೈಗೊಳ್ಳಲು ಸರ್ಕಾರ ಅನುಮತಿ ನೀಡಿದೆಯೇ?

ಆ) ನೀಡಿದ್ದಲ್ಲಿ, ಎಷ್ಟು ಸಮಯದಿಂದ ಈ ಗುತ್ತಿಗೆ ಆಧಾರದಲ್ಲಿ ಉಡುಪಿ ನಗರಸಭೆ ಶುಚಿತ್ವ ಕೆಲಸವನ್ನು ನಿರ್ವಹಿಸುತ್ತಿದೆ;

ಇ) ಈ ಕಾರ್ಯ ನಿರ್ವಹಣೆಗೆ ಉಡುಪಿ ನಗರ ಸಭೆಗೆ ವಿಶೇಷ ಅನುದಾನ ನೀಡುವ ಇರಾದೆ ಸರ್ಕಾರಕ್ಕೆ ಇದೆಯೇ;

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಹೌದು

ಆ) ದಿನಾಂಕ 01- 12- 1999 ರಿಂದ ಗುತ್ತಿಗೆಯನ್ನು ನೀಡಲಾಗಿದೆ

ಇ) ಇಲ್ಲ

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಉತ್ತರ ಬಂದಿದೆ. ಆರೋಗ್ಯವೇ ಭಾಗ್ಯ. ಆದರೆ ಉಡುಪಿ ನಗರಸಭೆಯ ಆರೋಗ್ಯ ದೌರ್ಭಾಗ್ಯವಾಗಿದೆ. ಪೌರಾಡಳಿತ ನಿರ್ದೇಶನಾಲಯ ಏನು ಇದೆ, ಅವರು ಯಾವ ರೀತಿಯಲ್ಲಿ ಕೆಲಸಕಾರ್ಯ ನಿರ್ವಹಿಸುತ್ತಾರೆನ್ನುವುದು ನಮಗೆ ಅರ್ಥವಾಗುತ್ತಿಲ್ಲ. ನಾವು ಯಾವುದೇ ಒಂದು ಪ್ರಸ್ತಾವನೆಯನ್ನು ಕಳುಹಿಸಿದರೂ ಸಹ ಒಂದೂವರೆ ವರ್ಷ ಬೇಕು ಅವರು ಅನುಮೋದನೆಗೆ. ಈ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆಯೇ ಎಂದು ಕೇಳಿದರೆ ''ಹೌದು'' ಎಂದು ಉತ್ತರದಲ್ಲಿ ಹೇಳಿದ್ದಾರೆ. ಎಲ್ಲಿ ಅನುಮತಿ ನೀಡಿದ್ದಾರೆ? ನಾವು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ ಇನ್ನೂ ಅನುಮತಿ ಬಂದಿಲ್ಲ. ಎರಡನೆಯದಾಗಿ ಉಡುಪಿ ಪುರಸಭೆ 9.7 ಕಿಲೋಮೀಟರ್ ಇರುವಾಗ 35 ಸಾವಿರ ಜನಸಂಖ್ಯೆ ಇರುವಾಗ 75 ಜನ ಪೌರ ಕಾರ್ಮಿಕರು ಇದ್ದರು. ಈಗ ಅದು 69.06 ಚದರ ಕಿಲೋಮೀಟರ್ ಆಗಿದೆ ಅವರು ಯಾವ ರೀತಿಯಲ್ಲಿ ಆರೋಗ್ಯವನ್ನು ಕಾಪಾಡಬೇಕು? ಗುತ್ತಿಗೆ ಆಧಾರದ ಮೇಲೆ ಸರ್ಕಾರ ಅನುದಾನ ಕೊಡುವುದಿಲ್ಲ ಅಂತ ಹೇಳುತ್ತಾರೆ. ದಯವಿಟ್ಟು ಇದಕ್ಕೆ ಅನುದಾನ ಕೊಡುತ್ತೀರಾ? ಮತ್ತು ಪೌರಾಡಳಿತ ನಿರ್ದೇಶನಾಲಯ ನಮಗೆ ಬೇಡ. ಈ ಹಿಂದೆ ಇದ್ದ ಹಾಗೆ ಡಿವಿಜನಲ್ ಕಮೀಷನರ್ ಮೂಲಕ ಅಥವಾ ಜಿಲ್ಲಾಧಿಕಾರಿಗಳ ಮೂಲಕ ನಮಗೆ ಅನುಮತಿ ಕೊಟ್ಟರೆ ಬಹಳ ತುರ್ತಾಗಿ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. ಇದನ್ನು ತಾವು ಪರಿಶೀಲಿಸುತ್ತೀರಾ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಅಭಿಪ್ರಾಯ ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ನಮ್ಮ ನಿರ್ದೇಶನಾಲಯದಿಂದ ಕಡೆ ನಮ್ಮ

ಸರ್ಕಾರಕ್ಕೆ ಬಂದಿದೆ. ಈ ಕಡತವನ್ನು ಅತಿ ಶೀಘ್ರದಲ್ಲಿಯೇ ವಿಲೇವಾರಿ ಮಾಡಿ ಪೌರ ಕಾರ್ಮಿಕರ ಸಮಸ್ಯೆ ಏನು ಇದೆ ಅದನ್ನು ನಿವಾರಣೆ ಮಾಡುತ್ತೇವೆ. ನಮ್ಮ ನಿರ್ದೇಶನಾಲಯದಲ್ಲಿ ಕಳೆದ ಒಂದು ವರ್ಷದಿಂದ ಕಾಗದ ಪತ್ರಗಳ ವಿಲೇವಾರಿಯಾಗುತ್ತಿಲ್ಲ ಎಂದು ಅನೇಕ ಜನ ಶಾಸಕರು ಹೇಳಿದ್ದಾರೆ. ಇನ್ನು ಮುಂದೆ ಆ ರೀತಿ ಆಗದ ಹಾಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನಮ್ಮ ನಿರ್ದೇಶನಾಲಯದಲ್ಲಿ ಯಾವುದೇ ಕಾರಣಕ್ಕೆ ಕಾಗದಪತ್ರಗಳ ವಿಲೇವಾರಿಯಲ್ಲಿ ತಡ ಆಡಬಾರದೆಂದು ನಾನು ಸೂಕ್ತ ಆದೇಶ ನೀಡುತ್ತೇನೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಉಡುಪಿ ನಗರಸಭೆಯಿಂದ ಸುಮಾರು 10 ಪ್ರಸ್ತಾವನೆಗಳು ಕಳೆದ ಒಂದು ವರ್ಷದಿಂದ ಬಾಕಿ ಇವೆ. ಅವುಗಳನ್ನು ಯಾವಾಗ ಪರಿಶೀಲನೆ ಮಾಡಿ ಕಳುಹಿಸುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಪೌರ ಕಾರ್ಮಿಕರ ಸಮಸ್ಯೆ ಇಡೀ ರಾಜ್ಯದಲ್ಲಿದೆ. ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ ನಾವು ಪೌರ ಕಾರ್ಮಿಕರ ನೇಮಕಾತಿ ಬಗ್ಗೆ ಪರಿಶೀಲಿಸುತ್ತಿದ್ದೇವೆ ಅಂತ.

ಶ್ರೀ ಕೆ. ರಾಮದಾಸ್ : ಮೈಸೂರು ನಗರ ಸುಮಾರು 10 ಕಿಲೋ ಮೀಟರ್ ಬೆಳದಿದ್ದರೂ ಹಿಂದೆ ಎಷ್ಟು ಜನ ಪೌರಕಾರ್ಮಿಕರು ಇದ್ದರೋ ಅಷ್ಟೇ ಜನ ಪೌರಕಾರ್ಮಿಕರು ಈಗಲೂ ಇದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ನಾಗಪ್ಪ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಅಭಿಪ್ರಾಯ ತಿಳಿದುಕೊಂಡು ಪೌರಕಾರ್ಮಿಕರ ಸಮಸ್ಯೆ ಏನು ಇದೆ ಅದನ್ನು ಆದಷ್ಟು ಬೇಗ ಬಗೆಹರಿಸಿಕೊಡುತ್ತೇನೆ.

ಶ್ರೀ ಎ.ಆರ್. ಕೃಷ್ಣ ಮೂರ್ತಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ತರಹ ಉತ್ತರ ಹೇಳಿದರೆ ಸರಿಯಾಗುವುದಿಲ್ಲ. 1962ನೇ ಇಸವಿಯಲ್ಲಿ ಇದ್ದಂತಹ ಪೌರ ಕಾರ್ಮಿಕರು ಈಗಲೂ ಇದ್ದಾರೆ. ಈಗ ಜನಸಂಖ್ಯೆ ಜಾಸ್ತಿಯಾಗಿದೆ. ಪಟ್ಟಣಗಳು, ಬಡಾವಣೆಗಳು ಜಾಸ್ತಿಯಾಗಿವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಬಗೆಹರಿಸುತ್ತೇವೆಂದು ಹೇಳಿದ್ದಾರೆ, ಒಂದು ತಿಂಗಳು ಸಮಯ ಕೊಡಿ. ಅವರು ಬಗೆಹರಿಸದಿದ್ದರೆ ಆಮೇಲೆ ಕೇಳಿ.

ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ನೆರವು

96 (1190) ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಸಾಲ ಹಾಗೂ ನೆರವಿನ ಯೋಜನೆಯ ಕಾಮಗಾರಿಯ ಅನುಷ್ಠಾನ ಯಾವ ಹಂತದಲ್ಲಿದೆ; ಯಾವಾಗ ಆರಂಭ ಮಾಡಲಾಗುವುದು;